36

# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಡಿ\2092\2017\ಉನಿವಿ–4

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:23/10/2018

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:** ದೂರುದಾರರಾದ ಶ್ರೀ.ಪಿ.ಲೋಕೇಶಪ್ಪ ಬಿನ್ ಮುನಿಯಪ್ಪ ಉರುಫ್ ಪಿಚ್ಚಪ್ಪ, ಮಾದೇರಹಳ್ಳಿ ಗ್ರಾಮ ಮತ್ತು ಅಂಚೆ, ಕೋಲಾರ ತಾಲ್ಲೂಕ್ ಮತ್ತು ಜಿಲ್ಲೆ ರವರ ದೂರನ್ನು ಪರಿಹರಿಸುವ ಬಗ್ಗೆ.

*********

ಕೋಲಾರ ಜಿಲ್ಲೆ ಮತ್ತು ತಾಲ್ಲೂಕ್ ಮಾದೇರಹಳ್ಳಿ ಗ್ರಾಮ ಮತ್ತು ಅಂಚೆ ನಿವಾಸಿಯಾದ ಶ್ರೀ.ಪಿ.ಲೋಕೇಶಪ್ಪ ಬಿನ್ ಮುನಿಯಪ್ಪ ಉರುಫ್ ಪಿಚ್ಚಪ್ಪ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಕೋಲಾರ ಜಿಲ್ಲೆ ಮತ್ತು ತಾಲ್ಲೂಕ್ 1) ಅರಬಿಕೊತ್ತನೂರು ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾದ ಶ್ರೀಮತಿ.ವಿ.ಕಮಲಾ ಮತ್ತು 2) ತಾಲ್ಲೂಕ್ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಯಾಗಿದ್ದ ಶ್ರೀ.ಎಂ.ಚಂದ್ರಪ್ಪ (ಇನ್ನು ಮುಂದೆ '1 ಮತ್ತು 2ನೇ ಎದುರುದಾರರು' ಎಂದು ಕ್ರಮವಾಗಿ, ಕರೆಯಲ್ಪಡುತ್ತಾರೆ) ರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:–** ಕೋಲಾರ ತಾಲ್ಲೂಕ್ ವಕ್ಕಲೇರಿ ಹೋಬಳಿ ಮಾದೇರ ಹಳ್ಳಿ ಗ್ರಾಮದಲ್ಲಿ ದೂರುದಾರರ ಮನೆಯ ಪಕ್ಕದಲ್ಲಿ ಶ್ರೀ.ಕೃಷ್ಣಪ್ಪ ಬಿನ್ ಕುವಪ್ಪ ಎಂಬುವವರು ಅಕ್ರಮವಾಗಿ ಸರ್ಕಾರಿ ಜಾಗ–ಚರಂಡಿಯಲ್ಲಿ ಶೌಚಾಲಯ ಮತ್ತು ಮೆಟ್ಟಿಲನ್ನು ಕಟ್ಟಿದ ಬಗ್ಗೆ ಎದುರುದಾರರುಗಳಿಗೆ ಸಲ್ಲಿಸಿದ ಅರ್ಜಿಯಲ್ಲಿ ಯಾವುದೇ ಕ್ರಮ ಕೈಗೊಂಡಿಲ್ಲವೆಂದು ಹೇಳಿದ್ದಾರೆ.

3. ದೂರಿನ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ–

ದೂರು ಅರ್ಜಿಯ ಮೇರೆಗೆ ಸದರಿ ಗ್ರಾಮದಲ್ಲಿ ಸ್ಥಳ ಪರಿಶೀಲಿಸಲಾಗಿ, ಗ್ರಾಮದ ಶ್ರೀ.ಕೃಷ್ಣಪ್ಪ ಬಿನ್ ಕೂವಪ್ಪ ರವರು ಕಟ್ಟಿರುವ ಮೆಟ್ಟಿಲುಗಳನ್ನು ತೆರವುಗೊಳಿಸುವಂತೆ ಮೌಖಿಕವಾಗಿ ತಿಳಿಸಿ, ನಂತರದಲ್ಲಿ ಎರಡು ತಿಳುವಳಿಕೆ ಪತ್ರಗಳು ಮತ್ತು ಅಂತಿಮ ತಿಳುವಳಿಕೆ ಪತ್ರ ನೀಡಿದ್ದರೂ ಮೆಟ್ಟಿಲು

37



ಮತ್ತು ಶೌಚಾಲಯವನ್ನು ತೆರವುಗೊಳಿಸದೇ ಇದ್ದಲ್ಲಿ, ತಾಲ್ಲೂಕ್ ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಯವರ ಅನುಮತಿ ಪಡೆದು ಮೆಟ್ಟಿಲು ಮತ್ತು ಶೌಚಾಲಯವನ್ನು ತೆರವುಗೊಳಿಸಲು ಕ್ರಮ ತೆಗೆದುಕೊಳ್ಳುವುದಾಗಿ ಹೇಳಿದ್ದಾರೆ.

4. ಎರಡನೇ (2ನೇ) ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿಲ್ಲ.

5. ದೂರಿಗೆ 2ನೇ ಎದುರುದಾರರಿಂದ ವರದಿಯನ್ನು ಕೇಳಲಾಗಿ, ಸದರಿಯವರು ತಮ್ಮ ವರದಿಯಲ್ಲಿ –

ದೂರಿಗೆ ಸಂಬಂಧಪಟ್ಟಂತೆ ಪಂಚಾಯತ್ ಅಭಿವೃದ್ಧಿ ಅಧಿಕಾರಿಯವರು ದಿನಾಂಕ:24/10/17ರಂದು ಗ್ರಾಮದಲ್ಲಿ ಮಹಜರ್ ಮಾಡಿದ್ದು, ಸದರಿ ಗ್ರಾಮದ ಶ್ರೀ.ಕೃಷ್ಣಪ್ಪ ಬಿನ್ ಕೂವಪ್ಪ ರವರು ಚರಂಡಿಯ ಮೇಲೆ ಶೌಚಾಲಯ ಮತ್ತು ಮೆಟ್ಟಿಲು ನಿರ್ಮಿಸಿರುವುದು ಸರಿಗಿದ್ದುಷ್ಟೆ. ಆದರೆ, ಸದರಿ ಸ್ಥಳವು ಸರ್ಕಾರಿ ಸ್ಥಳವಾಗಿಲ್ಲ ಎಂಬುದಾಗಿ ಗ್ರಾಮಸ್ಥರು ತಿಳಿಸಿದ್ದಾರೆ, ದೂರುದಾರರು ಮೃತಪಟ್ಟಿದ್ದಾರೆಂದು ಕೂಡ ಹೇಳಿದ್ದಾರೆ.

6. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

1) ಅರಬಿಕೊತ್ತನೂರು ಗ್ರಾಮ ಪಂಚಾಯತ್ ವ್ಯಾಪ್ತಿಗೆ ಸೇರಿದ ಮಡೇರಹಳ್ಳಿ ಗ್ರಾಮದ ವಾಸಿ ಶ್ರೀ.ಕೃಷ್ಣಪ್ಪ ಬಿನ್ ಕೂವಪ್ಪ ರವರು ಕಾನೂನುಬಾಹಿರವಾಗಿ ಚರಂಡಿ ಮೇಲೆ ಶೌಚಾಲಯ ಮತ್ತು ಮೆಟ್ಟಿಲು ನಿರ್ಮಿಸಿರುವುದರಿಂದ ಚರಂಡಿ ನೀರು ಹಾದು ಹೋಗಲು ತೊಂದರೆಯಾಗಿದೆ ಹಾಗೂ ಚರಂಡಿ ಕಾಮಗಾರಿ ಮಾಡಲು ಅಡಚಣೆ ಆಗಿರುವುದರಿಂದ, ಸದರಿ ಶೌಚಾಲಯ ಮತ್ತು ಮೆಟ್ಟಿಲನ್ನು ತೆಗವುಗೊಳಿಸುವಂತೆ ದಿನಾಂಕ:20/06/17 ಮತ್ತು 15/07/17ರಂದು 1ನೇ ಎದುರುದಾರರು ಸದರಿ ಶ್ರೀ.ಕೃಷ್ಣಪ್ಪ ಬಿನ್ ಕೂವಪ್ಪ ರವರಿಗೆ ತಿಳುವಳಿಕೆ ಪತ್ರಗಳನ್ನು ಜಾರಿ ಮಾಡಿದ್ದಾರೆ. ಸದರಿಯವರು ಮೆಟ್ಟಿಲು ಮತ್ತು ಶೌಚಾಲಯವನ್ನು ತೆರವುಗೊಳಿಸದೇ ಇದ್ದ ಕಾರಣ, ದಿನಾಂಕ:28/08/17ರಂದು 1ನೇ ಎದುರುದಾರರು ಅಂತಿಮ ನೋಟೀಸನ್ನು ನೀಡಿದ್ದಾರೆ. ಸದರಿ ನೋಟೀಸುಗಳನ್ನು ನೀಡುವ ಮೊದಲು 1ನೇ ಎದುರುದಾರರು ದಿನಾಂಕ:09/01/17ರಂದು ಗ್ರಾಮಸ್ಥರ ಸಮಕ್ಷಮ ಸ್ಥಳ ಪರಿಶೀಲನೆ ನಡೆಸಿದಾಗ, ಚರಂಡಿಯಲ್ಲಿ ಶೌಚಾಲಯ ಮತ್ತು ಮೆಟ್ಟಿಲುಗಳನ್ನು ನಿರ್ಮಿಸಿರುವುದು ಕಂಡು ಬಂದಿದೆ. ನೋಟೀಸುಗಳನ್ನು ನೀಡಿದರೂ ಸದರಿ ಶ್ರೀ.ಕೃಷ್ಣಪ್ಪ ಬಿನ್ ಕೂವಪ್ಪ ರವರು ಶೌಚಾಲಯ ಮತ್ತು ಮೆಟ್ಟಿಲನ್ನು ತೆರವುಗೊಳಿಸದೇ ಇರುವುದು ಕಂಡು ಬಂದಿದೆ. ದಿನಾಂಕ:30/08/17ರಂದು 1ನೇ ಎದುರುದಾರರು ಇನ್ನೊಂದು ಬಾರಿ ಸ್ಥಳ ಪರಿಶೀಲನೆ ಮಾಡಿ, ಮಹಜರ್ ಕ್ರಮವನ್ನು ಜರುಗಿಸಿದ್ದಾರೆ. ಆದರೆ, ಚರಂಡಿಯ ಮೇಲೆ ನಿರ್ಮಾಣ ಮಾಡಿದ ಶೌಚಾಲಯ ಮತ್ತು ಮೆಟ್ಟಿಲನ್ನು ತೆರವುಗೊಳಿಸಲು ಅವರು ಕ್ರಮ ಜರುಗಿಸಿಲ್ಲ. ಸದರಿ ಸ್ಥಳ ಸರ್ಕಾರಿ ಜಾಗವಲ್ಲವೆಂದು 2ನೇ ಎದುರುದಾರರು ವರದಿಯಲ್ಲಿ

N. Anand

ಹೇಳಿದ್ದಾರೆ. ದಿನಾಂಕ:24/10/17ರಂದು 1ನೇ ಎದುರುದಾರರು ಸ್ಥಳ ಪರಿಶೀಲನೆ ನಡೆಸಿದ ಮಹಜರಿನಲ್ಲಿ ಶೌಚಾಲಯ ಮತ್ತು ಮೆಟ್ಟಿಲು ನಿರ್ಮಿಸಿದ ಜಾಗ ಸರ್ಕಾರಿ ಜಾಗವಲ್ಲವೆಂದು ಹೇಳಿಲ್ಲ. ಸದರಿ ಚರಂಡಿಯಲ್ಲಿ ಕೊಳಚೆ ನೀರು ಹರಿದು ಹೋಗಲು ತೊಂದರೆಯಾಗುತ್ತಿದೆ ಮತ್ತು ಚರಂಡಿ ಕಾಮಗಾರಿ ಪ್ರಾರಂಭ ಮಾಡಲು ಅಡಚಣೆಯಾಗುತ್ತಿದೆಯೆಂದು ಸದರಿ ಸೂಚನಾ ಪತ್ರಗಳಲ್ಲಿ 1ನೇ ಎದುರುದಾರರೇ ಹೇಳಿದ್ದಾರೆ. ಒಂದೊಮ್ಮೆ ಸಾರ್ವಜನಿಕ \ ಸರ್ಕಾರಿ ಚರಂಡಿ ಆಗದಿದ್ದಲ್ಲಿ 1ನೇ ಎದುರುದಾರರು ದಿನಾಂಕ:20/06/17, 15/07/17 ಮತ್ತು 28/08/17ರಂದು ಒತ್ತುವರಿದಾರರಿಗೆ ಸೂಚನಾ ಪತ್ರಗಳನ್ನು ನೀಡುತ್ತಿರಲಿಲ್ಲ. ಕಾರಣ, ಸದರಿ ಚರಂಡಿ ಸಾರ್ವಜನಿಕ ಚರಂಡಿಯೆಂದು ಕಂಡು ಬಂದಿದೆ;

2) ಸರ್ಕಾರಿ ಜಾಗದಲ್ಲಿ ಕಟ್ಟಿರುವ ಶೌಚಾಲಯ ಮತ್ತು ಮೆಟ್ಟಿಲುಗಳನ್ನು ತೆರವುಗೊಳಿಸಿ, ಆ ಜಾಗದಲ್ಲಿ ಸರಿಯಾದ ರೀತಿಯಲ್ಲಿ ಚರಂಡಿ ನಿರ್ಮಿಸಬೇಕೆಂದು ದೂರುದಾರರು 2ನೇ ಎದುರುದಾರರಿಗೂ ಅರ್ಜಿಯನ್ನು ಸಲ್ಲಿಸಿದ್ದು, ಸದರಿ ಅರ್ಜಿಗಳಲ್ಲಿ 2ನೇ ಎದುರುದಾರರು ಯಾವುದೇ ಕ್ರಮ ಕೈಗೊಳ್ಳದೇ, ದೂರಿಗೂ ಸಹ ಆಕ್ಷೇಪಣೆಯನ್ನು ಸಲ್ಲಿಸದೇ, "ಶೌಚಾಲಯ ಮತ್ತು ಮೆಟ್ಟಿಲು ನಿರ್ಮಿಸಿದ ಜಾಗ ಸರ್ಕಾರಿ ಜಾಗವಾಗಿರುವುದಿಲ್ಲ" ಎಂದು ಅಪೂರ್ಣ \ ಅಸ್ಪಷ್ಟ ಮಾಹಿತಿಯನ್ನು ಸಲ್ಲಿಸಿದ್ದಾರೆ;

3) ಕರ್ನಾಟಕ ಪಂಚಾಯತ್ ರಾಜ್ ಕಾಯಿದೆ, ಕಲಂ 58 ಮತ್ತು 72ರನ್ವಯ ಯಾವುದೇ ಸಾರ್ವಜನಿಕ ಜಾಗದ ಅತಿಕ್ರಮಣವನ್ನು ತೆರವುಗೊಳಿಸಲು ಕ್ರಮ ವಹಿಸುವುದು ಗ್ರಾಮ ಪಂಚಾಯತ್‌ನ ಕಾರ್ಯ\ಕರ್ತವ್ಯ ಆಗಿದೆ. 1ನೇ ಎದುರುದಾರರು ನೋಟೀಸ್‌ಗಳನ್ನು ನೀಡುವುದನ್ನು ಹೊರತುಪಡಿಸಿ, ಅಕ್ರಮವಾಗಿ ನಿರ್ಮಿಸಿದ ಶೌಚಾಲಯ ಮತ್ತು ಮೆಟ್ಟಿಲನ್ನು ತೆರವುಗೊಳಿಸಲು ಬೇರೆ ಯಾವುದೇ ಕ್ರಮ ಜರುಗಿಸಿಲ್ಲ. 2ನೇ ಎದುರುದಾರರು 1ನೇ ಎದುರುದಾರರ ಮೇಲಾಧಿಕಾರಿಯಾಗಿ ಸಾರ್ವಜನಿಕ ಜಾಗದಲ್ಲಾದ ಒತ್ತುವರಿಯ ಬಗ್ಗೆ ಯಾವುದೇ ದಾಖಲೆಗಳನ್ನು ಪರಿಶೀಲಿಸಿಲ್ಲ ಮತ್ತು ಒತ್ತುವರಿಯನ್ನು ತೆರವುಗೊಳಿಸಲು ಯಾವುದೇ ಕ್ರಮ ವಹಿಸಿಲ್ಲ. ಆದ್ದರಿಂದ, ಎದುರುದಾರರುಗಳ ಕರ್ತವ್ಯ ಲೋಪ ಮೇಲ್ನೋಟಕ್ಕೆ ಸಾಬೀತಾಗಿದೆ.

7. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಸದರಿ 1 ಮತ್ತು 2ನೇ ಎದುರುದಾರರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ಇಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಕ್ರಮ ಕೈಗೊಳ್ಳಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

8. ಆದ್ದರಿಂದ, ಸದರಿ ಸಾರ್ವಜನಿಕ ಜಾಗದ ಒತ್ತುವರಿಯನ್ನು ತೆರವುಗೊಳಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(1)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ.

9. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಒಂದು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

(ನ್ಯಾಯಮೂರ್ತಿ ಎನ್.ಆನಂದ)
ಉಪಲೋಕಾಯುಕ್ತ,
ಕರ್ನಾಟಕ ರಾಜ್ಯ.